**ಪಿಡಬ್ಲ್ಯೂ-1**

**ದಿನಾಂಕ 03.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟಿ ಸವಾಲು 13ನೇ ಪ್ರತಿವಾದಿ ಪರ ಶ್ರೀ. ಸಿ ಎಸ್ ಎಸ್

**ವಕೀಲರವರಿಂದಃ**

ನನ್ನ ತಂದೆಗೆ ದಾವಾ ಸ್ವತ್ತುಗಳು ಭೂ ನ್ಯಾಯ ಮಂಡಳಿಯಿಂದ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆ ದಿನಾಂಕ 17.11.1987 ರಲ್ಲಿ ನನ್ನ ತಂದೆಯ ಗಂಡು ಮಕ್ಕಳಾದ ಹಾಗೂ ನನ್ನ ಸಹೋದರರಾದ ದೇವೆಗೌಡ, ನಾಗಣ್ಣ, ಶಿವಣ್ಣ, ಸುಬ್ಬೆಗೌಡ ಮತ್ತು ಸೋಮಶೇಖರ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಬಳಿ ಅವರು ಭಾಗ ಬೇಕು ಎಂದು ಕೇಳಿರುತ್ತಾರೆ, ಆಗ ನನ್ನ ತಂದೆ ಬದುಕಿರುವವರೆಗೂ ಇಷ್ಟಿಷ್ಟು ಜಮೀನುಗಳಲ್ಲಿ ಕೃಷಿ ಮಾಡಿಕೊಳ್ಳಿ ಎಂದು ನನ್ನ ತಂದೆ ನನ್ನ ಅಣ್ಣಂದಿರಿಗೆ ತಿಳಿಸಿರುತ್ತಾರೆ. ದಿನಾಂಕ 17.11.1987 ರ ವಿಭಾಗದಂತೆ ನನ್ನ ಅಣ್ಣಂದಿರು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

3. ನನ್ನ ಸಹೋದರ ದೇವೆಗೌಡ ವಿಭಾಗದಂತೆ ಅವರ ಪಾಲಿನ ಆಸ್ತಿಯಲ್ಲಿ ಸರ್ವೆ ನಂಬರ 35 ವಿಸ್ತೀರ್ಣ 7 ಗುಂಟೆ ಜಮೀನನ್ನು ಆಲೇಗೌಡ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರವಾಗಿ ಸುಮಾರು 20 ವರ್ಷಗಳ ಆಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನನ್ನ ತಂದೆ ಜೀವಂತವಾಗಿದ್ದಾಗಲೇ ಮಾರಾಟ ಮಾಡಿರುತ್ತಾರೆ ಎಂದು ನುಡಿದರು. ಸದರಿ ಸ್ವತ್ತನ್ನು ಖರೀದಿ ಮಾಡಿರುವ ಆಲೇಗೌಡರು ಸದರಿ ಜಮೀನುಗಳಲ್ಲಿ 2 ಮನೆಗಳನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರನ್ನು ಸಹಾ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಕ್ರಯವಾದಾಗಲೇ ನಾನು ಸದರಿ ಸ್ವತ್ತಿನಲ್ಲಿ ಭಾಗವನ್ನು ಕೇಳಲು ತೊಂದರೆ ಇರಲಿಲ್ಲ, ನನ್ನ ತಂದೆಯವರು ನನಗೆ ಭಾಗ ಕೊಡುತ್ತಾರೆ ಸುಮ್ಮನೇ ಇರು ಎಂದು ಹೇಳಿದ ಕಾರಣ ನಾನು ದಾವೆ ಹಾಕಿರಲಿಲ್ಲ.

4. ನನ್ನ ಸಹೋದರ ದೇವೆಗೌಡ ಸ ನಂ 35 ಮತ್ತು 36 ರಲ್ಲಿ 3 ಗುಂಟೆ ಜಮೀನನ್ನು ಸಾಕಮ್ಮ ಕೋಂ ಜವರೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರವು 20 ವರ್ಷಗಳ ಹಿಂದೆಯೇ ಆಗಿರುತ್ತದೆ ಎಂದರೆ ಸರಿ. ಸಾಕಮ್ಮ ಈಗ ಮೃಪತಟ್ಟಿರುತ್ತಾರೆ ಎಂದರೆ ಸರಿ. ಸಾಕಮ್ಮರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

5. ನನ್ನ ಸಹೋದರ ದೇವೆಗೌಡ ಸ ನಂ 35 ಮತ್ತು 36 ರಲ್ಲಿ 3 ಗುಂಟೆ ಜಮೀನನ್ನು ಚಂದ್ರೇಗೌಡ ಬಿನ್ ಮಲ್ಲೇಶಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಚಂದ್ರೇಗೌಡರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

6. ದಿನಾಂಕ 04.05.1993 ರಂದು ನನ್ನ ತಂದೆ 4 ನೇ ಪ್ರತಿವಾದಿಗೆ ಸರ್ವೆ ನಂಬರ 25 ಕ್ಕೆ ಸಂಬಂಧಪಟ್ಟಂತೆ ವಿಲ್ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಅರ್ಧ ವಿಲ್ ಬರೆದಿರುತ್ತಾರೆ ಎಂದು ನುಡಿದರು. 4 ನೇ ಪ್ರತಿವಾದಿ ವಿಲ್ಲ್ ಮೇಲೆ ಪ್ರೊಬೇಟನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 17.11.1987 ರಲ್ಲಿ ಸಹೋದರರಾದ ಸುಬ್ಬೇಗೌರಿಗೆ ಬಂದ ಜಮೀನಿನಲ್ಲಿ ಆತನ ಹೆಂಡತಿಯಾದ ಜಯಮ್ಮನಿಗೆ ಸ. ನಂ 35 ಮತ್ತು 36 ರಲ್ಲಿ 4 ಗುಂಟೆ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಜಯಮ್ಮನವರ ಹೆಸರಿನಲ್ಲಿರುವ 4 ಗುಂಟೆ ಜಮೀನಿನಲ್ಲಿ 2 ಗುಂಟೆ ಜಮೀನನ್ನು ಎಣ್ಣಹೊಳೆಕೊಪ್ಪಲು ಗ್ರಾಮದ ಕೃಷ್ಣ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೃಷ್ಣೇಗೌಡರಿಂದ ದಿನಾಂಕ 11.03.2005 ರಂದು 13 ನೇ ಪ್ರತಿವಾದಿ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. ದಿನಾಂಕ 03.07.1997 ರಲ್ಲಿ 4 ನೇ ಪ್ರತಿವಾದಿ ಸರ್ವೆ ನಂಬರ 35 ಮತ್ತು 36 ರಲ್ಲಿ 2 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಪಹಣಿ ಪತ್ರಗಳನ್ನು ತೆಗೆದುಕೊಂಡ ನಂತರ ಸದರಿ ಕ್ರಯಗಳು ನಮಗೆ ಗೊತ್ತಾಯಿತು. ಕ್ರಯಕ್ಕೆ ಪಡೆದು ಸದರಿ ಸ್ವತ್ತುಗಳಲ್ಲಿ ಖರೀದಿದಾರರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುವ ಸ ನಂ 35 ಮತ್ತು 36 ರಲ್ಲಿ 4 ಗುಂಟೆ ಜಮೀನನ್ನು ರಾಜೇಶ ಬಿನ್ ಲಕ್ಕೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

8. ನನ್ನ ಸಹೋದರನಾದ ಶಿವಣ್ಣನವರು ಸರ್ವೆ ನಂಬರ 35 ಮತ್ತು 36 ರಲ್ಲಿ 4 ಗುಂಟೆ ಜಮೀನನ್ನು ರಾಜೇಗೌಡ ಬಿನ್ ಕಾಳೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವಾಗ ರಾಜೇಗೌಡರು ಜೀವಂತರಾಗಿದ್ದರು ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಸರ್ವೆ ನಂಬರ 35 ಮತ್ತು 36 ರ ಜಮೀನುಗಳನ್ನು 25 ವರ್ಷಗಳ ಹಿಂದೆ ಮಾರಾಟ ಮಾಡಿದ್ದು, ಖರೀದಿದಾರರು ಸದರಿ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರರ ನಡುವೆ ವೈಮನಸ್ಸು ಉಂಟಾದ ಕಾರಣ 20 ವರ್ಷಗಳ ಹಿಂದೆಯೇ ಮಾರಾಟವಾಗಿರುವ ಸ್ವತ್ತುಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹಾ ಖರೀದಿದಾರರಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ದಿನಾಂಕ 17.11.1987 ರಲ್ಲಿ ನನ್ನ ತಂದೆ ಜೀವಿತ ಕಾಲದಲ್ಲಿ ವಿಭಾಗವಾಗಿರುತ್ತೆ ಎಂದರೆ ಸಾಕ್ಷಿಯು ನನ್ನ ತಂದೆ ನನ್ನ ಸಹೋದರರು ಕೂಲಿಗೆ ಹೋಗುವುದು ಬೇಡ, ಇಷ್ಟಿಷ್ಟು ಜಮೀನಿನಲ್ಲಿ ಕೃಷಿ ಮಡಿಕೊಳ್ಳಿ ಎಂದು ಹೇಳಿರುತ್ತಾರೆ, ಆದರೆ ಅವರು ನನ್ನ ತಾಯಿಗೆ ತಿಳಿಸದೇ ಖಾತೆಯನ್ನು ಮಾಡಿಕೊಂಡಿರುತ್ತಾರೆ. ಖಾತೆಯ ವಿಚಾರ ನಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಈಗಾಗಲೇ ಮಾರಾಟ ಮಾಡಿರುವ ಕಾರಣ ನನಗೆ ಭಾಗಾಂಶ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮುಂದುವರಿದ ವಾದಿ ಪರ ವಿಚಾರಣೆಗೆ ವಾದಿ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಗಿದೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಪಾಂಡವಪುರ.**